**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 1227/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಚೈತನ್ಯ ಕೆ.ಎಂ | **ಚಾ.ಸಾ.-1** |
| **ತಂದೆ ಹೆಸರು** | - | ಮರಿಸ್ವಾಮಿ ಬಿ | **ಫ್ರಾ.ಸಾ.-8** |
| **ವಯಸ್ಸು** | - | 42 ವರ್ಷ | |
| **ಉದ್ಯೋಗ** | - | ಪಿಐ, ಜೆಸಿ ನಗರ, ಬೆಂಗಳೂರು | |
| **ವಾಸ ಸ್ಥಳ** | - | ಬೆಂಗಳೂರು | |

ದಿನಾಂಕಃ 24-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನಾನು 26-06-2014 ರಿಂದ 29-06-2015 ರವರೆಗೆ ಮದ್ದೂರು ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-6 ಗಿರೀಶ್ ರವರು ಠಾಣೆಗೆ ಹಾಜರಾಗಿ ನೀಡಿದ ಮಾಹಿತಿಯ ಮೇರೆಗೆ ದಿ 11-04-2015 ರಂದು ನಾನು ಚಾಸಾ-2 ರಿಂದ 5 ರವರನ್ನು ಕರೆದು, ಮದ್ದೂರು ಟೌನಿನ ವಾಸಿ ಗಿರೀಶ್ ಎಂಬುವವರಿಗೆ ಸಿದ್ದರಾಜು ಮತ್ತು ಹೇಮಗಿರಿ ಎಂಬುವವರು ಕರೆ ಮಾಡಿ, ನಮ್ಮ ಹತ್ತಿರ ಕೋಟಾ ನೋಟು ಇದ್ದು, ನೀವು 5 ಲಕ್ಷ ಹಣವನ್ನು ಕೊಟ್ಟರೆ ನಾವು 12 ವರೆ ಲಕ್ಷ ಹಣವನ್ನು ಕೊಡುವುದಾಗಿ ನೀವು ವ್ಯವಹಾರದಲ್ಲಿ ಚೆನ್ನಾಗಿದ್ದೀರಿ ನಾವು ಕೊಡುವ ಹಣವನ್ನು ಉಪಯೋಗಿಸಿಕೊಳ್ಳಿ ಈ ಅವಕಾಶವನ್ನು ಕಳೆದುಕೊಳ್ಳಬೇಡಿ ಎಂದು ಹೇಳಿರುತ್ತಾರೆ ಚಾಸಾ-6 ರವರು ಠಾಣೆಗೆ ಬಂದು ನನಗೆ ಮಾಹಿತಿಯನ್ನು ಕೊಟ್ಟಿರುತ್ತಾರೆ. ನಂತರ ಚಾಸಾ-6 ರವರಿಗೆ ಕೆಲವು ಸೂಚನೆಗಳನ್ನು ನೀಡಿ, ಮುಂದೆ ಕರೆ ಬಂದಾಗ ನಾವು ಹೇಳಿದ ರೀತಿ ಮಾಡುವುದಾಗಿ ತಿಳಿಸಿರುತ್ತೆವೆ. ನಂತರ ದಿ 10-04-2015 ರಂದು ಹೇಮಗಿರಿ ಕಡೆಯವರಿಂದ ಕರೆ ಬಂದಿದ್ದು, ನಾವು ಹೇಳಿದಂತೆ ನಾವು 5 ಲಕ್ಷ ಹಣವನ್ನು ರೆಡಿ ಮಾಡಿಕೊಂಡಿದ್ದೇವೆ, ನೀವು ಹೇಳಿದ ಸ್ಥಳಕ್ಕೆ ಬನ್ನಿ ಎಂದು ಹೇಳು ಎಂದು ನಾವು ಚಾಸಾ-6 ರವರಿಗೆ ತಿಳಿಸಿರುತ್ತೆವೆ. ನಂತರ ಚಾಸಾ-6 ರವರು ಈ ಬಗ್ಗೆ ನಮಗೆ ಮಾಹಿತಿ ತಿಳಿಸಿರುತ್ತಾರೆ. ಇವರುಗಳ ಮೇಲೆ ದಾಳಿ ಮಾಡಲು ಹೋಗಲು ಚಾಸಾ-2 ರಿಂದ 5

ರವರಿಗೆ ತಿಳಿಸಿದ್ದು, ಅವರುಗಳು  ಒಂದು ಕಾರಿನಲ್ಲಿ  ನಾನು ಸಿಬ್ಬಂದಿಗಳನ್ನು ಮತ್ತು ಚಾಸಾ-6 ರವರನ್ನು ಕರೆದುಕೊಂಡು ಕೆ ಎಂಎಫ್ ಬಳಿ ಹೋಗಿ ಕಾಯುತ್ತಿದ್ದಾಗ, 3 ಜನರು ಆಸಾಮಿಗಳು ಕೆಎ-10-ಎಸ್ 4286 ಮೋಟಾರ್ ಸೈಕಲ್ ನಲ್ಲಿ ಬಂದಿರುತ್ತಾರೆ. ನಂತರ ನಮ್ಮ ಕಾರಿನಲ್ಲಿದ್ದ ಚಾಸಾ-6 ರವರನ್ನು ಕೆಳಗೆ ಇಳಿಸಿ ನೋಡಲು ತಿಳಿಸಿದಾಗ, ಅವರೇ ಎಂದು ಖಚಿತಪಡಿಸಿಕೊಂಡು  ನಮ್ಮ ಕಡೆ ನೋಡಿ ಕಣ್ಣಿನ ಸಿಗ್ನಲ್  ಕೊಟ್ಟು ಅವರು ತಂದಿದ್ದಕಾಲೇಜ್ ಬ್ಯಾಗ್ ನ್ನು ಚಾಸಾ-6 ರವರಿಗೆ ಕೊಡುವುದನ್ನು ನಮ ಸಿಬ್ಬಂದಿಗಳು ಕಾಯುತ್ತಿದ್ದು, ನಾವುಗಳು  ಬ್ಯಾಗ್ ನ್ನು ಕೊಟ್ಟ ತಕ್ಷಣ  ನಾನು ಮತ್ತು ನಮ್ಮ ಸಿಬ್ಬಂದಿಗಳು  ಆಸಾಮಿಗಳನ್ನು ಸುತ್ತುವರಿದು  ಹಿಡಿದುಕೊಂಡಿರುತ್ತೆವೆ. ನಾನು ಚಾಸಾ-6 ರವರ ಬಳಿ ಇದ್ದ ಕಾಲೇಜು ಬ್ಯಾಗ್ ನ್ನು ಬಿಚ್ಚಿ ನೋಡಲಾಗಿ ಬ್ಯಾಗ್ ತುಂಬಾ ಹಳೆಯ ನ್ಯೂಸ್ ಪೇಪರ್ ಗಳು ತುಂಬಿದ್ದು, ರ್ಯಾಪರ್ ಹಾಕಿದ್ದು, ರ್ಯಾಪರ್ ಮೇಲೆ 1 ಸಾವಿರ ಮುಖಬೆಲೆಯ ಮತ್ತು 500 ರೂ  ಮುಖಬೆಲೆಯ ಮತ್ತು 100 ಮುಖಬಲೆಯ ನೋಟುಗಳನ್ನು ಕವರೆ ಮೇಲೆ ಅಂಟಿಸಿದ್ದು,  ಪರಿಶೀಲಿಸಲಾಗಿ ಮಾಹಿತಿದಾರರಾದ ಚಾಸಾ-6 ರವರಿಗೆ ಮೋಸ ಮಾಡುವ ಉದ್ದೇಶದಿಂದ ಹಾಗೂ ಸುಲಭ  ರೀತಿಯಲ್ಲಿ ಹಣವನ್ನು ಪಡೆಯುವುದಕ್ಕಾಗಿ ಈ ರೀತಿ ಮಾಡಿರುತ್ತಾರೆಂದು ಖಚಿತಪಡಿಸಿಕೊಂಡ ಮೇಲೆ ನಾನು 3 ಜನ ಆಸಾಮಿಗಳನ್ನು, ಕಾಲೇಜ್ ಬ್ಯಾಗ್  ನ್ನು ಮತ್ತು ಅವರು ತಂದಿದ್ದ ಮೋಟಾರ್ ಸೈಕಲ್ ನ್ನು ವಶಕ್ಕೆ ಪಡೆದು  ಠಾಣೆಗೆ ಬಂದು ಮದ್ಯಾಹ್ನ 3.30 ಗಂಟೆಗೆ ಆರೋಪಿತರ  ವಿರುದ್ದ ವರದಿ ತಯಾರಿಸಿ,  ಠಾಣಾ ಮೊ.ಸಂಖ್ಯೆ. 142/15 ರಂತೆ ನಮೂದು ಮಾಡಿ, ನ್ಯಾಯಾಲಯಕ್ಕೆ ನಿವೇಶದಿಸಿಕೊಂಡಿರುತ್ತೆನೆ. ನಂತರ ನನ್ನ ಸ್ವವರದಿಯನ್ನು ತಯಾರಿಸಿ ಪ್ರಕರಣ ದಾಖಲಿಸಿರುತ್ತೆನೆ. ನಂತರ ಸದರಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಯವರಿಗೆ ನೀವೇದಿಸಿಕೊಂಡಿರುತ್ತೆನೆ. ನಂತರ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ  ಪಂಚರಾದ  ಚಾಸಾ-6 ರಿಂದ ಚಾಸಾ-8 ರವರ ಸಮಕ್ಷಮ ಸಂಜೆ 4.00-5.00 ಗಂಟೆಯವರೆಗೂ ಅಮಾನತ್ತು ಮಹಜರ್ ಮಾಡಿ, 3 ನೋಟುಗಳು ಮತ್ತು ಒಂದು ಕಾಲೇಜ್ ಬ್ಯಾಗ್ ನ್ನು ವಶಪಡಿಸಿಕೊಂಡು, ಠಾಣಾ ಮೊ.ಸಂಖ್ಯೆ. 97/15 ರಂತೆ ನಮೂದು ಮಾಡಿ, ನ್ಯಾಯಾಲಯಕ್ಕೆ ನಿವೇಶದಿಸಿಕೊಂಡಿರುತ್ತೆನೆ.  ನಂತರ ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ  ಪಂಚರಾದ  ಚಾಸಾ-7 ಮತ್ತು ಚಾಸಾ-8 ರವರ ಸಮಕ್ಷಮ ಸಂಜೆ

5.30-6.00 ಗಂಟೆಯವರೆಗೂ ಸ್ಥಳ ಮಹಜರ್ ಮಾಡಿರುತ್ತೆನೆ. ನಂತರ ಆರೋಪಿತರ ಸ್ವಇಚ್ಚಾ ಹೇಳಿಕೆಯನ್ನು ಮತ್ತು ಚಾಸಾ-2 ರಿಂದ ಚಾಸಾ-8 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಸದರಿ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ-2 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

ಸ್ವವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ-5 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ನಿಪಿ-1 ಅಮಾನತ್ತು ಮಹಜರ್ ನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 ಡಿ ಎಂದು ಗುರುತಿಸಲಾಯಿತು. ನಿಪಿ-2 ಸ್ಥಳ ಮಹಜರ್ ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 ಸಿ ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶವನ್ನು ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )
ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.